

ತಲ್ಲಂ ನಂಜುಂಡಶೆಟ್ಟಿ, ರಾಜ್‌ಕುಮಾರ್ ಹಾಗೂ ದೇವರಾಜ ಅರಸು: ಚಿತ್ರೋದ್ಯಮದ ಉಳಿವಿಗೆ ಇಂಥ ಸಮೀಕರಣ ಈಗಲೂ ಅಗತ್ಯ

ಸಿನಿಮಾಗಳ ಬಗ್ಗೆ ಪ್ರೇಕ್ಷಕ ನಂಬಿಕೆ ಕಳೆದುಕೊಂಡ ಸ್ಪಷ್ಟ ಸೂಚನೆಯಾಗಿತ್ತು. ಆದರೆ, ಸಿನಿಮಾ ಮಂದಿ ಜಾಗೃತಗೊಳ್ಳಲಿಲ್ಲ. ಸ್ಪರ್ಧಾತ್ಮಕ ಯುಗದಲ್ಲಿ ಯಾವುದನ್ನೂ ನಿರ್ಬಂಧಿಸುವಂತಿಲ್ಲ; ಕನ್ನಡ ಚಿತ್ರಗಳು ಗುಣಮಟ್ಟದ ಮೂಲಕ ಪರಭಾಷಾ ಚಿತ್ರಗಳೊಂದಿಗೆ ಸ್ಪರ್ಧಿಸಲಿ ಎಂದು ಡಬ್ಬಿಂಗ್ ಪರ ನಿಂತವರು ವಾದಿಸಿದಾಗ, ಸ್ಪರ್ಧೆ ನಡೆಯಬೇಕಾದುದು ಸಮಬಲರ ನಡುವೆಯೇ ಹೊರತು ಬಲಶಾಲಿ ಹಾಗೂ ದುರ್ಬಲನ ನಡುವೆಯಲ್ಲ ಎಂದು ಹೇಳುವ ತ್ರಾಸನ್ನೂ ಸಿನಿಮಾ ಮಂದಿ ತೆಗೆದುಕೊಳ್ಳಲಿಲ್ಲ. ಒಂದೆಡೆ, ಡಬ್ಬಿಂಗ್ ಚಿತ್ರಗಳಿಗೆ ಕನ್ನಡ ಪ್ರೇಕ್ಷಕರು ದೊಡ್ಡಿಬಾಗಿಲು ತೆರೆದರು. ಇನ್ನೊಂದೆಡೆ, ಗುಣಾತ್ಮಕ ಚಿತ್ರಗಳ ಕೊರತೆ ತೀವ್ರಗೊಂಡಿತು. ತಾರಾ ವರ್ಚಸ್ಸಿನ ನಾಯಕ ನಟರು ತಮ್ಮ ಅಹಮ್ಮಿನ ಕೋಟೆಗಳಿಂದ ಹೊರಬರಲಿಲ್ಲ. ಸಿದ್ಧಸೂತ್ರಗಳ ವರ್ತುಲವನ್ನು ಬಿಡಿಸಿಕೊಳ್ಳುವ ಪ್ರಯತ್ನವನ್ನು ನಿರ್ದೇಶಕರು ಮಾಡಲಿಲ್ಲ. ಪಾಪದ ನಿರ್ಮಾಪಕರು ಸಿನಿಮಾ ನಿರ್ಮಾಣದ ವ್ಯಾಕರಣವನ್ನು ಅರ್ಥ ಮಾಡಿಕೊಳ್ಳುವಷ್ಟು ಜಾಣರಾಗಲಿಲ್ಲ. ಇದೆಲ್ಲದರ ಪರಿಣಾಮ, ಕನ್ನಡ ಸಿನಿಮಾಗಳಿಂದ ಪ್ರೇಕ್ಷಕ ವಿಮುಖನಾಗುತ್ತಲೇ ಹೋದ. ಜವಾಬ್ದಾರಿಯಿಲ್ಲದ, ಉತ್ತರದಾಯಿತ್ವದ ಅರಿವಿಲ್ಲದ ಪುಂಡುಪೋಕರಿ ಸಿನಿಮಾ ಕಥನಗಳ ಬಗ್ಗೆ ಯಾರಿಗೆ ತಾನೆ ಪ್ರೀತಿಯಿರಲು ಸಾಧ್ಯ?

## ಕನ್ನಡ ಚಿತ್ರರಂಗದ ಇಂದಿನ ಸ್ಥಿತಿ ನೋಡಿ:

1. ಇತ್ತೀಚಿನ ವರ್ಷಗಳಲ್ಲಿ ಆವರಿಸಿಕೊಂಡಿರುವ 'ಪ್ಯಾನ್ ಇಂಡಿಯಾ' ಭ್ರಮೆಯಲ್ಲಿ ಸಿಕ್ಕಿಬಿದ್ದಿರುವ ತಾರಾ ವರ್ಚಸ್ಸಿನ ನಾಯಕನಟರು ಎರಡು ವರ್ಷಕ್ಕೋ ಮೂರು ವರ್ಷಕ್ಕೋ ಒಂದು ಸಿನಿಮಾ ಮಾಡುತ್ತಿದ್ದಾರೆ. ಇದರಿಂದಾಗಿ, ಅಳಿದುಳಿದ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯುವ ಸಾಮರ್ಥ್ಯದ ಸಿನಿಮಾಗಳ ಕೊರತೆಯಾಗಿದೆ.

2. ಬೆಳ್ಳಿತೆರೆ ಮಾತ್ರವಲ್ಲ, ಕಿರುತೆರೆಯಲ್ಲೂ ಕನ್ನಡದ ತಾರೆಗಳ ಹೊಳಪು ಮಬ್ಬಾಗತೊಡಗಿದೆ. ಡಬ್ಬಿಂಗ್ ಚಿತ್ರಗಳು ದೊಡ್ಡ ಪ್ರಮಾಣದಲ್ಲಿ ಕಿರುತೆರೆ ವಾಹಿನಿಗಳಲ್ಲಿ ಪ್ರಸಾರವಾಗುತ್ತಿವೆ. ಡಬ್ಬಿಂಗ್ ಧಾರಾವಾಹಿಗಳೂ ಚಾಲ್ತಿಯಲ್ಲಿವೆ.

3. ಹಿರಿಯ ನಟ ನಟಿಯರ ಜೊತೆಗೆ ಕಿರಿಯರೂ ಕೂಡ ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರರಾಗಿ ಕೂರುವ ಮೂಲಕ ಹೊಸ ಉದ್ಯೋಗಗಳನ್ನು ಕಂಡುಕೊಳ್ಳತೊಡಗಿದ್ದಾರೆ.

4. ಕಿರುತೆರೆ ಜಾಹೀರಾತುಗಳಲ್ಲಿ ಕನ್ನಡ ತಾರೆಗಳ ಬದಲು ಪರಭಾಷೆಯ ನಾಯಕ ನಾಯಕಿ ಕಾಣಿಸಿಕೊಳ್ಳುವುದು ಸಹಜ ಎನ್ನುವಂತಾಗಿದೆ. ಆ ಮುಖಗಳ ಬಗ್ಗೆ ನೋಡುಗರಿಗೂ ತಕರಾರು ಇದ್ದಂತೆ ಕಾಣಿಸುತ್ತಿಲ್ಲ.

5. ನಿರ್ಮಾಪಕನ ಬಂಡವಾಳವನ್ನು ಹಿಂತಿರುಗಿಸುತ್ತೇನೆ ಎಂದು ಖಚಿತವಾಗಿ ಹೇಳುವಂಥ ಆತ್ಮವಿಶ್ವಾಸದ ನಿರ್ದೇಶಕರನ್ನು ದುರ್ಬೀನು ಹಾಕಿ ಹುಡುಕುವ ಪರಿಸ್ಥಿತಿಯಿದೆ.

6. ಕನ್ನಡ ಸಿನಿಮಾ ಎನ್ನುವುದು ಕನ್ನಡ ಶಬ್ದಗಳಿಗೆ ಸೀಮಿತ ಎನ್ನುವಂತಾಗಿದೆ. ಕನ್ನಡ ಪರಿಸರ ಹಾಗೂ ಸಂಸ್ಕೃತಿಯನ್ನು ಸಿನಿಮಾಗಳಲ್ಲಿ ಮೂಡಿಸುವುದು ಸಾಮಾಜಿಕ–ಸಾಂಸ್ಕೃತಿಕ ಜವಾಬ್ದಾರಿ ಎನ್ನುವ ಅರಿವು ಸಿನಿಮಾ ಮಂದಿಗೆ ಇದ್ದಂತಿಲ್ಲ.

7. ಕೋಮು ರಾಜಕೀಯ ಸಿನಿಮಾದಲ್ಲೂ ಕಾಣಿಸಿಕೊಂಡಿರುವುದರಿಂದ, ಒಳ್ಳೆಯ ಸಿನಿಮಾ ರೂಪಿಸಿದರೆ ಪ್ರಶಸ್ತಿಯಾದರೂ ಖಚಿತ ಎನ್ನುವ ಭರವಸೆಯೂ ಈಗ ಉಳಿದಿಲ್ಲ. ಇದರಿಂದಾಗಿ ಪ್ರಯೋಗಶೀಲ ಸಿನಿಮಾಗಳ ನಿರ್ಮಾತೃಗಳೂ ಸಿನಿಮಾದ ಬಗ್ಗೆ ಉತ್ಸಾಹ ಕಳೆದುಕೊಳ್ಳುವಂತಾಗಿದೆ.

8. ಚಾನಲ್‌ಗಳು ಹಾಗೂ ಒಟಿಟಿ ವೇದಿಕೆಗಳು ಕನ್ನಡ ಸಿನಿಮಾಗಳನ್ನು ಕೊಳ್ಳುತ್ತಿಲ್ಲ ಎನ್ನುವ ಅಳಲು ಗಾಢವಾಗಿದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಕನ್ನಡ ಸಿನಿಮಾಗಳಿಗೆ ತಾರತಮ್ಯ ಎಸಗಲಾಗುತ್ತಿದೆ ಎನ್ನುವ ಆರೋಪಗಳು ಆಗಾಗ ಕೇಳಿಸುತ್ತವೆ. ವೈಯಕ್ತಿಕ ಮಟ್ಟದ ಈ ಅಳಲು–ದೂರುಗಳು ಒಕ್ಕೊರಲಿನ ರೂಪ ಪಡೆಯುತ್ತಿಲ್ಲ.

9. ಜನ ತಿರಸ್ಕರಿಸುತ್ತಿದ್ದರೂ ಹೊಸ ಸಿನಿಮಾಗಳು ಸೆಟ್ಟೇರುತ್ತಲೇ ಇವೆ. 'ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ' ಎನ್ನುವ ಮನಸ್ಥಿತಿ ಮುಂದುವರೆದಿದೆ.

10. ಜನಪ್ರಿಯ ಚಿತ್ರನಿರ್ಮಾಣ ಸಂಸ್ಥೆಗಳು ಸ್ಥಗಿತಗೊಂಡಿವೆ. ಏಕ ಪರದೆ ಚಿತ್ರಮಂದಿರಗಳು ಮುಚ್ಚುತ್ತಿವೆ. ಕನ್ನಡ ಸಿನಿಮಾ ಸಂಸ್ಕೃತಿ ಕತ್ತಿಯೊಂದಿಗೆ ಸಾಮು ನಡೆಸುತ್ತಿದೆ.

## ಮುಂದೇನು?

ಚಿತ್ರರಂಗದಲ್ಲಿ ಇನ್ನೂ ಉಳಿದುಕೊಂಡಿರುವ ಕನ್ನಡ ಸಿನಿಮಾ ನಿರ್ಮಾತೃಗಳ ಮುಂದೆ ಎರಡು ದಾರಿಗಳಿವೆ:

1. ಕನ್ನಡ ಪ್ರೇಕ್ಷಕರ ಕಳೆದುಹೋದ ವಿಶ್ವಾಸವನ್ನು ಮರಳಿ ಗಳಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದು. ಈ ವಿಶ್ವಾಸ ಮರಳಿ ಗಳಿಸುವುದು ಹೇಗೆಂದರೆ – ಸಿನಿಮಾ ನಿರ್ಮಾಣ ಜೂಜೆಂದು ತಿಳಿದಿರುವುದರಿಂದ, ಒಳ್ಳೆಯ ವಸ್ತುವಿನ ಮೇಲಷ್ಟೇ ಪಣ ಕಟ್ಟುವುದು; ಅನಗತ್ಯ ಬೊಜ್ಜನ್ನು ಕಳೆದುಕೊಂಡು ಆರೋಗ್ಯವನ್ನು ಮರಳಿ ಪಡೆಯುವುದು; ಸರಳ ಹಾಗೂ ಅರ್ಥಪೂರ್ಣ ಸಾಧ್ಯತೆಗಳ ಪ್ರಯೋಗಗಳಲ್ಲಿ ತೊಡಗಿಕೊಳ್ಳುವುದು; ಸರ್ಕಾರದ ಸವಲತ್ತುಗಳಿಗಿಂತ ಜನರನ್ನು ಮುಟ್ಟುವ ಸಾಧ್ಯತೆಗಳನ್ನು ಯೋಚಿಸಿ ಸಿನಿಮಾ ಮಾಡುವುದು.

2. ಒಳ್ಳೆಯ ಸಿನಿಮಾ ಮಾಡಲು ಸಾಧ್ಯವಾಗದಿದ್ದಲ್ಲಿ, ಕಲ್ಲು–ಕಬ್ಬಿಣ ಮಾರುವ ಜಾಣತನ ತೋರುವುದು.

ಪ್ರತಿಕ್ರಿಯಿಸಿ: feedback@sudha.co.in